ಪದಬಂಧ




### ಎಡದಿಂದ ಬಲಕ್ಕೆ

1. ಮನೆ ಮಠ ಮಾರಿದರೂ ಸರಿ, ಹಿಡಿದ ಪಟ್ಟು ಬಿಡದಾಕೆ 4
3. ಜೋಳಿಗೆ ಹಿಡಿದು ಬಂದವನೊಡನೆ ಇದೆಂಥ ಕಲಹ! 3
4. ವಿಮಾನದಿಂದ ಇಳಿದು ಬಂದವನದು ಪರಮ ಕುಳ್ಳನದೇ ಅವತಾರ 3
6. ಭಾರೀ ಬಯಕೆಗಳಿರುವವರ ಸಹವಾಸ ಹೆದರಿಕೆ ತಂದೀತು 4
8. ಪ್ರಜಾಪತಿಯನ್ನೇ ನೆನಪಿಸುವ ಹೆಸರಿನ ಪ್ರಸಿದ್ಧ ಕುಸುಮ 4
10. ನೋಡುಗರೆಲ್ಲ ಬಂದು ಸೇರುವ ವೇಳೆಗೆ ಮಧ್ಯಾಹ್ನದ ಸಮಯ ಆಗಿತ್ತು 4
12. ಇಂಥ ಜ್ವರಕ್ಕೆಲ್ಲ ಬೇಕೇ 'ಬಿಡುವಿನ ಸಮಯ'? 4
16. ಎಳೇ ಮಕ್ಕಳ ನುಡಿಯಲ್ಲಿ ಲಕ್ಷ್ಮಿ ಹೇಗಾದಾಳು? 3
17. ವೈಮನಸ್ಯ ನಿಲ್ಲಿಸಬೇಕೆಂದು ಕೋರಿಕೆ 3
18. ತೋರಿಕೆಗಾಗಿ ಕೊಂಡು ತಂದದ್ದು ಈ ಕಾಯಿಪಲ್ಲೆ 4

### ಮೇಲಿನಿಂದ ಕೆಳಕ್ಕೆ

1. ಅಷ್ಟೂ ಹೂದಳಗಳ ಬಣ್ಣ ಬರೀ ಅರಿಸಿನ 3
2. ವಾರಿಜನಾಭನನ್ನು ಮೊದಲು ಪೂಜಿಸುವುದು ಅಲ್ಲಿನ ಸಂಪ್ರದಾಯ 3
3. ಜೋಳದ ಹಿಟ್ಟನ್ನು ಕಲಸುವ ಮೊದಲು ಸ್ನಾನ ಆಗಿರಲಿ 3
5. ನಾರಿಯರಿಗೆ ಪ್ರಿಯವಾದದ್ದು ಇಂತಹದೇ ಶಹರ 3
6. ಭೋಜನಕ್ಕೆಂದು ಸೇರಿದವರೆಲ್ಲ ನಿಷ್ಠಾವಂತ ಮನುಷ್ಯರೇ ತಾನೇ 4
7. ತೋರಿಸಲು ಬಂದದ್ದು ಪರಾಕ್ರಮ; ಆದರೆ ತಲುಪಿದ್ದು ಒಂದು ಪಾತಾಳ ಲೋಕ 4
8. ವ್ಯಾಪಾರದವರು ಕಂಡು ಬಂದದ್ದು ಎಂತಹ ಸಾಗರ? 4
9. ತಬ್ಬಲಿಯಾಗುವುದನ್ನು ತಪ್ಪಿಸಿದ್ದು ಆಕೆಯ ತಪಃಶಕ್ತಿ 4
11. ಓಲಗವನ್ನು ಅದ್ಭುತವಾಗಿ ನುಡಿಸುತ್ತಿದ್ದಾನೆ ಆ ಹಳ್ಳಿಯವ 3
13. ಜಹ್ನು ಋಷಿಯ ಮಗಳು ಗಂಗೆ ಹೇಗಾದಾಳು? 3
14. ಆತನ ಆತ್ಮಗೌರವಕ್ಕೆ ಮಿತಿಯೇ ಇಲ್ಲ ಬಿಡಿ 3
15. ಮೂರ್ಖರಿಗೆ ತಿಳಿಯದೇ? ಅದು ಆಳವಾದ ಒಂದು ಹಳ್ಳ 3

---

### 13–10–2022 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಸ್ತಮಿಸು 3. ನಿರಭ್ರ 4. ಮಾರ್ದವ 6. ಕರಿನೀರು 7. ನಯನ 9. ಅಭಯ 11. ಕರಾರು 13. ತಪಸ್ವಿ 15. ಶಂಖನಾದ 17. ವಣಿಕ 18. ಹನುಮ 19. ರತ್ನದಾನ

**ಮೇಲಿನಿಂದ ಕೆಳಕ್ಕೆ**

1. ಅಭ್ರಕ 2. ಸುಮಾರು 3. ನಿಲಯ 5. ವಲ್ಲಭ 7. ನಡುಕ 8. ನವಿರು 9. ಅಕ್ಷತ 10. ಯಶಸ್ವಿ 12. ರಾಜೀವ 14. ಪಶ್ಚಿಮ 15. ಶಂಕರ 16. ದಹನ

ಪ್ರಶ್ನಾಂಕಣ

# ಚಿಕ್ಕ ಬೆಕ್ಕು: ಏನು ವಿಶೇಷ?

ಪ್ರಪಂಚದಲ್ಲಿ 38 ಬಗೆಯ ಬೆಕ್ಕುಗಳಿವೆ. ಅವೆಲ್ಲವನ್ನೂ ದೊಡ್ಡ ಬೆಕ್ಕುಗಳು (Big Cats) ಮತ್ತು ಚಿಕ್ಕ ಬೆಕ್ಕುಗಳು (Small Cats) ಎಂದು ಇಬ್ಬಗೆಗಳಲ್ಲಿ ವರ್ಗೀಕರಿಸಲಾಗಿದೆ. ಹುಲಿ, ಸಿಂಹ, ಚಿರತೆ, ಜಾಗ್ವಾರ್, ಹಿಮ ಚಿರತೆ, ಕ್ಲೌಡೆಡ್ ಲೆಪರ್ಡ್, ಚೀತಾ ಮತ್ತು ಪ್ಯೂಮಾ ಈ ಎಂಟು ವಿಧಗಳು ದೊಡ್ಡ ಬೆಕ್ಕುಗಳು. ಉಳಿದ 30 ವಿಧಗಳು, ಎಂದರೆ ಲಿಂಕ್ಸ್, ಮಾರ್ಗೇ, ಓಸಿಯಲಾಟ್, ಟೈಗರ್ ಕ್ಯಾಟ್, ಬಾಬ್ ಕ್ಯಾಟ್, ಪಲ್ಲಾಸ್ ಕ್ಯಾಟ್, ಬೇ ಕ್ಯಾಟ್, ಗೋಲ್ಡನ್ ಕ್ಯಾಟ್, ಸರ್ವಲ್, ಕ್ಯಾರಕಲ್... ಇತ್ಯಾದಿ ಎಲ್ಲವೂ ಚಿಕ್ಕ ಬೆಕ್ಕುಗಳ ಗುಂಪಿಗೆ ಸೇರಿವೆ (ಚಿತ್ರ 2, 3, 4 ರಲ್ಲಿ ಚಿಕ್ಕ ಬೆಕ್ಕುಗಳ ಮೂರು ವಿಧಗಳನ್ನು ಗಮನಿಸಿ). ಸ್ಪಷ್ಟವಾಗಿಯೇ ಚಿಕ್ಕ ಬೆಕ್ಕುಗಳದು ದೊಡ್ಡ ಬೆಕ್ಕುಗಳಿಗಿಂತ ಚಿಕ್ಕದಾದ ದೇಹ ಗಾತ್ರ. ಚಿಕ್ಕ ಬೆಕ್ಕುಗಳೆಲ್ಲವೂ ಮನೆ ಬೆಕ್ಕಿನಂತೆ ಮಿಯಾಂವ್ ಗುಡುತ್ತವೆ, ಅಷ್ಟೆ; ಅವುಗಳಲ್ಲಿ ಯಾವುದಕ್ಕೂ ಘರ್ಜಿಸುವ ಸಾಮರ್ಥ್ಯ ಇಲ್ಲ (ಇದೇ ಕಾರಣದಿಂದ ದೊಡ್ಡ ಬೆಕ್ಕುಗಳ ಗುಂಪಿನಲ್ಲಿರುವ ಚೀತಾ ಮತ್ತು ಪ್ಯೂಮಾಗಳನ್ನು ಚಿಕ್ಕ ಬೆಕ್ಕುಗಳ ಗುಂಪಿಗೇ ಸೇರಿಸುವ ಪರಿಪಾಟವೂ ಇದೆ).

ವಿಶೇಷ ಏನೆಂದರೆ, ಚಿಕ್ಕ ಬೆಕ್ಕುಗಳ ಗುಂಪಿನ ಪ್ರಭೇದಗಳ ನಡುವಣ ಗಾತ್ರಾಂತರವೂ ವಿಪರೀತ: ಒಂದೇ ಕಿಲೋ ತೂಕದ 'ರಸ್ಟೀ ಸ್ಪಾಟೆಡ್ ಕ್ಯಾಟ್'ನಿಂದ ಸುಮಾರು ಇಪ್ಪತ್ತು ಕಿಲೋ ತೂಕ ಮುಟ್ಟುವ 'ಲಿಂಕ್ಸ್'ವರೆಗೆ. ಅಂಟಾರ್ಕ್ಟಿಕಾ ಮತ್ತು ಆಸ್ಟ್ರೇಲಿಯಾ ಭೂ ಖಂಡಗಳನ್ನು ಬಿಟ್ಟು ಉಳಿದೆಲ್ಲ ಭೂ ಖಂಡಗಳಲ್ಲೂ ಚಿಕ್ಕ ಬೆಕ್ಕುಗಳು ನೆಲೆಸಿವೆ. (ಈ ಎರಡೂ ಭೂ ಖಂಡಗಳಲ್ಲಿ ದೊಡ್ಡ ಬೆಕ್ಕುಗಳು ಯಾವುವೂ ಇಲ್ಲ. ಆದರೆ ಮನುಷ್ಯರೊಡನೆ ಸಾಗಿ ಹೋಗಿ, ಮುದ್ದಿನ ಸಾಕು ಪ್ರಾಣಿಯಾಗಿರುವ ಮನೆ ಬೆಕ್ಕು (ಚಿತ್ರ 1) ಮಾತ್ರ ಆಸ್ಟ್ರೇಲಿಯಾದಲ್ಲಿ ಭಾರೀ ಸಂಖ್ಯೆಯಲ್ಲಿದೆ.

ಸಣ್ಣ ಬೆಕ್ಕುಗಳು ಧರೆಯಲ್ಲಿ ಅವತರಿಸಿದ್ದು ಈಗ್ಗೆ ಸುಮಾರು 10.7 ದಶಲಕ್ಷ ವರ್ಷ ಹಿಂದೆ. ಈವರೆಗೆ ಏಳು ವಿಭಿನ್ನ ವಂಶಗಳ 30 ಪ್ರಭೇದಗಳಾಗಿ ಅವು ವಿಕಸನಗೊಂಡಿವೆ. ಕಾಡು ಬೆಕ್ಕುಗಳ ಒಂದು ಪ್ರಭೇದದಿಂದ ಕವಲೊಡೆದ ಮನೆ ಬೆಕ್ಕುಗಳು ಈಗ್ಗೆ ಹತ್ತು ಸಾವಿರ ವರ್ಷ ಹಿಂದಷ್ಟೇ ಭೂಮಿಯಲ್ಲಿವೆ.

ಆದರೆ ವಿಪರ್ಯಾಸ ಏನೆಂದರೆ, ದೊಡ್ಡ ಬೆಕ್ಕುಗಳಿಗಿಂತ ಬಹಳ ಹೆಚ್ಚು ಪ್ರಭೇದಗಳಿದ್ದೂ ಮನೆ ಬೆಕ್ಕನ್ನು ಬಿಟ್ಟು ಚಿಕ್ಕ ಬೆಕ್ಕುಗಳೆಲ್ಲವೂ ಬಹುಮಟ್ಟಿಗೆ ಅಪರಿಚಿತ. ದೊಡ್ಡ ಬೆಕ್ಕುಗಳ ಭಾರೀ ಪ್ರಸಿದ್ಧಿಯ ನೆರಳಲ್ಲಿ ಸಿಲುಕಿರುವ ಚಿಕ್ಕ ಬೆಕ್ಕುಗಳು ಹಾಗಾಗಿಯೇ ಜನಪ್ರಿಯ ಸ್ಥಾನ ಮಾನ ಏನನ್ನೂ ಪಡೆದಿಲ್ಲ. ಆದರೂ ಅವುಗಳ ಅತ್ಯಾಕರ್ಷಕ ಮಚ್ಚೆಚುಕ್ಕಿ ಚಿತ್ತಾರಗಳ ಮೃದು ಚರ್ಮಕ್ಕಾಗಿ ಪ್ರತಿವರ್ಷ ಅವು ಕೋಟ್ಯಂತರ ಸಂಖ್ಯೆಯಲ್ಲಿ ಕಳ್ಳ ಬೇಟೆಗೆ ಗುರಿಯಾಗುತ್ತಿವೆ; ಮನುಷ್ಯರಿಂದಾಗಿ ಅವುಗಳ ನೈಸರ್ಗಿಕ ನೆಲೆಗಳೂ ಭರದಿಂದ ಕುಗ್ಗುತ್ತಿವೆ. ತತ್ಪರಿಣಾಮವಾಗಿ ಅವು ಗಂಭೀರ ಅಪಾಯದ ಪರಿಸ್ಥಿತಿಯಲ್ಲಿವೆ. ಈಗಾಗಲೇ ಚಿಕ್ಕ ಬೆಕ್ಕುಗಳ 12 ಪ್ರಭೇದಗಳು ಬೆರಳೆಣಿಕೆ ಸಂಖ್ಯೆ ಮುಟ್ಟಿವೆ.




■ ಎನ್. ವಾಸುದೇವ್